# ಗೃಹಾಧಾರಿತ ಶಿಕ್ಷಣ

ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಶಾಲಾ ಶಿಕ್ಷಣ ವಾಹಿನಿಗೆ ತರುವ ಪ್ರಯತ್ನದಲ್ಲಿ ಹಲವಾರು ಶಿಕ್ಷಕರ ಪ್ರಶ್ನೆ ಶಾಲೆಗೇ ಬರಲಾಗದ, ಶಾಲೆಗೆ ಬಂದರೂ, ಮಾನಸಿಕ ಅಸ್ವಸ್ಥತೆಯಿಂದಾಗಿ ಏನನ್ನು ಕೇಳದ, ಶಾಲೆಯಲ್ಲಿ ಕೂರಲಾಗದ ಮಗುವನ್ನು ಶಾಲೆಗೆ ತರುವುದು ಹೇಗೆ ? ಮಕ್ಕಳನ್ನು ಶಾಲೆಗೆ ತಂದು ಕಲಿಸುವುದು ಹೇಗೆ ? ಈ ಮಕ್ಕಳಿಗೆ ಸಾಮಾನ್ಯ ಮಕ್ಕಳ ಜೊತೆ ಶಿಕ್ಷಣ ಕೊಡಲು ಸಾಧ್ಯವೇ ? ಹಾಗಾಗಿ ಈ ಮಕ್ಕಳನ್ನು ಶಾಲೆಗೆ ದಾಖಲಿಸುವುದು ಹೇಗೆ ? ಈ ಎಲ್ಲಾ ಪ್ರಶ್ನೆಗಳಿಗೆ ಸರಳ ಉತ್ತರವೇ **'ಗೃಹ ಆಧಾರಿತ ಶಿಕ್ಷಣ'**.

## ಪರಿಕಲ್ಪನೆ :

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಹಿನ್ನಲೆಯಲ್ಲಿ 6-14 ವಯೋಮಾನದವರೆಗಿನ ಎಲ್ಲಾ ಮಕ್ಕಳಿಗೂ ಶಿಕ್ಷಣ ಕಡ್ಡಾಯ. ಎಲ್ಲಾ ಮಕ್ಕಳಿಗೂ ಶಿಕ್ಷಣ ಮೂಲಭೂತ ಹಕ್ಕು ಎನ್ನುವಾಗ, ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೂ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿ. ಆದರೆ ಮೇಲಿನ ಅಂಶಗಳನ್ನು ಗಮನಿಸಿದಲ್ಲಿ ಶಾಲೆಗೆ ಬರಲು ಸಾಧ್ಯವಾಗದ ವಿಕಲ ಚೇತನ ಮಕ್ಕಳಿಗೆ ಶಿಕ್ಷಣವನ್ನು ಮಗು ಇರುವೆಡೆಯಲ್ಲೇ ಅಂದರೆ ಮನೆಯಲ್ಲಿಯೇ ಶಿಕ್ಷಣ ನೀಡಬೇಕಾಗುತ್ತದೆ. ವಿಶೇಷ ಅಗತ್ಯತೆಯುಳ್ಳ ಶಾಲೆಗೆ ಬರಲಾಗದ ಮಕ್ಕಳನ್ನು ಶಾಲಾ ವಾಹಿನಿಗೆ ತರುವ ಸಲುವಾಗಿ, ರೂಪಿಸಿರುವ ಕಾರ್ಯತಂತ್ರವೇ "ಗೃಹಾಧಾರಿತ ಶಿಕ್ಷಣ" ಈ ಕಾರ್ಯತಂತ್ರದಲ್ಲಿ ಶಿಕ್ಷಕರೇ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಮನೆಗೆ ಹೋಗಿ ಮಗುವಿಗೆ ಸಾಧ್ಯವಾಗುವ ಕನಿಷ್ಠ ಮಟ್ಟದ ಶಿಕ್ಷಣ ನೀಡಿ ಮುಖ್ಯ ವಾಹಿನಿಗೆ ತರಲಾಗುತ್ತದೆ.

## ಉದ್ದೇಶಗಳು :

- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಆರಂಭಿಕವಾಗಿ ಗೃಹಾಧಾರಿತ ಶಿಕ್ಷಣ ನೀಡಿ ಅಂತಿಮವಾಗಿ ಅವರನ್ನು ಶಾಲಾ ವಾಹಿನಿಗೆ ತರುವುದು.
- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೂ ಶಿಕ್ಷಣದಲ್ಲಿ ಸಮಾನ ಅವಕಾಶ ಕಲ್ಪಿಸುವುದು.
- ವಿಶೇಷ ಅಗತ್ಯತೆಯುಳ್ಳ ಮಗುವಿಗೆ/ಪೋಷಕರಿಗೆ ನಮ್ಮ ಬಗ್ಗೆ ಕಾಳಜಿ ವಹಿಸುವವರು ಇದ್ದಾರೆ ಎನ್ನುವ ಭರವಸೆಯ ಭಾವನೆಯನ್ನು ತರುವುದು.
- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಅಗತ್ಯ ಜೀವನ ಕೌಶಲ್ಯಗಳನ್ನು ಕಲಿಸುವುದು.
- ಸಾಮಾನ್ಯ ಮಕ್ಕಳಂತೆ ಎಲ್ಲಾ ಸೌಲಭ್ಯಗಳನ್ನು ಪಡೆದು ನಿರೀಕ್ಷಿತ ಮಟ್ಟದ ಕಲಿಕೆ ಪಡೆಯುವಂತೆ ಮಾಡುವುದು.
- ಶಿಕ್ಷಣಕ್ಕೆ ಪೂರಕವಾದ ವೈದ್ಯಕೀಯ ಪುನಶ್ಚೇತನ ದೊರಕಿಸುವುದು.
- ತನ್ಮೂಲಕ ಸ್ವಾವಲಂಬಿಯಾಗಲು ಅವಕಾಶ ಕಲ್ಪಿಸುವುದು.

## ವ್ಯಾಪ್ತಿ :

- 6-14 ರವರೆಗಿನ ವಯೋಮಾನದ ಶಾಲೆಗೆ ಹಾಜರಾಗಲು ಸಾಧ್ಯವಾಗದ ವಿಶೇಷ ಅಗತ್ಯತೆಯುಳ್ಳ ಮಕ್ಕಳು.
- ಮಗು ಎಲ್ಲಿ ವಾಸವಾಗಿದೆಯೋ ಅಲ್ಲಿಯೇ ಸ್ವಯಂ ಸೇವಕರು / ಶಿಕ್ಷಕರು ಹೋಗಿ ಮಗುವಿಗೆ ಶಿಕ್ಷಣ ನೀಡಬೇಕು.
- ಮಗುವಿಗೆ ಶಿಕ್ಷಣ ನೀಡುವ ಸ್ವಯಂಸೇವಕ / ಶಿಕ್ಷಕರು ವಿಶೇಷ / ಅಗತ್ಯ ತರಬೇತಿ ಹೊಂದಿರುವುದು ಕಡ್ಡಾಯ.
- ಈ ಮಕ್ಕಳಿಗೆ ಜೀವನ ಕೌಶಲ್ಯಗಳನ್ನು ಹಾಗೂ ಸಾಮರ್ಥ್ಯಗಳನ್ನು ಕಲಿಸುವುದು ಗೃಹ ಆಧಾರಿತ ಶಿಕ್ಷಣದ ಆಕಾಂಕ್ಷೆ
- ಪೋಷಕರ ತರಬೇತಿ, ಆಪ್ತ ಸಮಾಲೋಚನೆ.
- ಸಮುದಾಯದ ಜಾಗೃತಿ

## ಗೃಹ ಆಧಾರಿತ ಶಿಕ್ಷಣ ಯಾರಿಗಾಗಿ :

- ಶಾಲೆಯಿಂದ ಹೊರಗಿರುವ 6–14 ವಯೋಮಾನದ ಶಾಲೆಗೆ ಹಾಜರಾಗಲು ಸಾಧ್ಯವಾಗದ ವಿಶೇಷ ಅಗತ್ಯವುಳ್ಳ ಎಲ್ಲಾ ಮಕ್ಕಳಿಗೆ
- ಶಾಲೆಗೆ ದಾಖಲಾಗಿ ಮಾನಸಿಕ ಅಥವಾ ದೈಹಿಕ ನ್ಯೂನತೆ ಕಾರಣಕ್ಕಾಗಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳಿಗೆ.

**ಗಮನಿಸಿ : ಮಗು ವಿಶೇಷ ಅಗತ್ಯತೆಯುಳ್ಳ ಮಗುವಾಗಿದ್ದರೂ, ಶಾಲೆಗೆ ಬರುವಂತಿದ್ದರೆ ಆ ಮಗುವಿಗೆ ಇತರೆ ಮಕ್ಕಳ ಜೊತೆಯಲ್ಲೇ ಶಿಕ್ಷಣ ನೀಡಬೇಕು. ಸಮನ್ವಯ ಶಿಕ್ಷಣ ಒಪ್ಪಿತ ಶಿಕ್ಷಣ ಕ್ರಮ, ಗೃಹಧಾರಿತ ಶಿಕ್ಷಣ–ಶಾಲೆಗೆ ಹಾಜರಾಗಲು ಸಾಧ್ಯವಾಗದ ವಿಕಲ ಚೇತನ ಮಗುವಿಗಾಗಿಯೇ ಇದೆ.**

## ಗೃಹ ಆಧಾರಿತ ಶಿಕ್ಷಣವನ್ನು ಎಲ್ಲಿ ನಡೆಸಬೇಕು :

- ಈ ಕಾರ್ಯ ತಂತ್ರವನ್ನು ನ್ಯೂನತೆಯುಳ್ಳ ಮಗು ಎಲ್ಲಿ ವಾಸವಾಗಿದೆಯೋ ಅಲ್ಲಿಯೇ ನಡೆಸಬೇಕು. ಅಂದರೆ ಮಗುವಿನ ಮನೆಗೇ ಸ್ವಯಂ ಸೇವಕರು ಹೋಗಿ ಮಗುವಿಗೆ ಶಿಕ್ಷಣ ನೀಡಬೇಕು.
- ಸಾಧ್ಯವಿದ್ದರೆ 2–3 ಮಕ್ಕಳನ್ನು ಒಟ್ಟಿಗೆ ಸೇರಿಸಿ ಶಿಕ್ಷಣ ನೀಡಬಹುದು.
- 3 ಮಕ್ಕಳಿರುವ ಹತ್ತಿರದ ಸ್ಥಳ ಗಮನಿಸಿ ಒಬ್ಬ ಸ್ವಯಂ ಸೇವಕರು ಈ ಮಕ್ಕಳಿಗೆ ಶಿಕ್ಷಣ ನೀಡಲು ವ್ಯವಸ್ಥೆಗೊಳಿಸಬೇಕು.

## ಗೃಹ ಆಧಾರಿತ ಶಿಕ್ಷಣವನ್ನು ಯಾರು ನಡೆಸಬಹುದು ?

- ಇದೊಂದು ವಿಶೇಷ ಮತ್ತು ಅಗತ್ಯ ಕಾರ್ಯಕ್ರಮವಾಗಿದ್ದು ಎರಡು ರೀತಿಯಲ್ಲಿ ನಿರ್ವಹಿಸಬಹುದು. ಈ ಕಾರ್ಯತಂತ್ರವನ್ನು ಇಲಾಖೆಯೇ ಸ್ವಯಂ ಸೇವಕರ ಮೂಲಕ ನಡೆಸಬಹುದು. ಆದರೆ ಸ್ವಯಂ ಸೇವಕರನ್ನು ಏಜೆನ್ಸಿಗಳ ಮೂಲಕವೇ ನೇಮಿಸಿಕೊಳ್ಳಬೇಕು.
- ಆಸಕ್ತ ಮತ್ತು ಈ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ (ಎನ್.ಜಿ.ಓ.) ಮೂಲಕವೂ ಹಮ್ಮಿಕೊಳ್ಳಬಹುದು.
- ಇಲಾಖೆ ವತಿಯಿಂದ ನಡೆಸುವಾಗ ಬ್ಲಾಕ್‌ನ ಎಲ್ಲಾ ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಪಟ್ಟಿ ಪಡೆದು ಕ್ರಿಯಾ ಯೋಜನೆ ತಯಾರಿಸಿ, ಸ್ವಯಂ ಸೇವಕರನ್ನು ಗುರ್ತಿಸಿ, NGOಗಳ ಮೂಲಕವೇ ನೇರವಾಗಿ ಬಿ.ಇ.ಓ./ಬಿ.ಆರ್.ಸಿ.ಗಳು ಕಾರ್ಯತಂತ್ರವನ್ನು ಯೋಜಿಸಬೇಕು ಹಾಗೂ ಅನುಷ್ಠಾನಾಧಿಕಾರಿಗಳೂ ಸಹ ಇವರೇ ಆಗಿರುತ್ತಾರೆ.
- ಎಸ್.ಡಿ.ಎಂ.ಸಿ.ಗಳು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬಾರದು, ಆದರೆ ಕಾರ್ಯಕ್ರಮ ನಡೆಯುತ್ತಿರುವ ಕುರಿತು ಉಸ್ತುವಾರಿ ಮಾಡಬಹುದು.
- ಮಕ್ಕಳಿಗೆ ಶಿಕ್ಷಣ ನೀಡುತ್ತಿರುವುದನ್ನು ಸಿ.ಆರ್.ಪಿ/ಐ.ಇ.ಆರ್.ಟಿ.ಗಳು ಮತ್ತು ಸಂಬಂಧಿಸಿದ ಶಾಲೆಗಳವರು ಖಚಿತಪಡಿಸಿಕೊಳ್ಳಬೇಕು.
- ಈ ಕಾರ್ಯತಂತ್ರವನ್ನು ಮಗು ಪಡೆದುಕೊಳ್ಳುತ್ತಿರುವುದನ್ನು ಶಾಲೆಯವರು ದೃಢಪಡಿಸಿಕೊಂಡು, ಶಾಲೆಗೆ ದಾಖಲಿಸಬೇಕು. ಹಾಗೂ ಸಂಬಂಧಿಸಿದ ಸ್ವಯಂ ಸೇವಕರು ದೃಡೀಕರಣದೊಂದಿಗೆ ಆ ಮಗುವಿಗೆ ಹಾಜರಾತಿ ನೀಡಬೇಕು.

## ಇಲಾಖೆಯ ಸೌಲಭ್ಯಗಳು :

ಸಮವಸ್ತ್ರ, ಮಧ್ಯಾಹ್ನದ ಉಪಹಾರ, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ನೀಡಲಾಗುವ ಭತ್ಯೆ, ಸಾಧನ ಸಾಮಗ್ರಿಗಳು ಇತ್ಯಾದಿ.

## ಅವಧಿ :

- 12 ತಿಂಗಳು, (ವಾರಕ್ಕೆ ಪ್ರತಿ ಮಗುವಿಗೆ 2 ದಿನ ಶಿಕ್ಷಣ ಕೊಡಬೇಕು).
- ವರ್ಷದ 12 ತಿಂಗಳೂ ಶಿಕ್ಷಣ ಕೊಡುವ ಏರ್ಪಾಟು ಮಾಡುವುದು ಪ್ರತಿ ಭೇಟಿಯಲ್ಲಿ ಕನಿಷ್ಠ 3 ಗಂಟೆಗಳ ಕಾಲ ಸ್ವಯಂ ಸೇವಕರು ಶಿಕ್ಷಣ ನೀಡಬೇಕು.

- ಬಿಆರ್‌ಸಿ ಹಂತದಲ್ಲಿ ಸಂಪನ್ಮೂಲ ಕೊಠಡಿಗಳನ್ನು ಸ್ಥಾಪಿಸಿದೆ. ಗೃಹಾಧಾರಿತ ಮಕ್ಕಳು ಈ ಕೇಂದ್ರದ ಸೌಲಭ್ಯ ಪಡೆಯಲು ಅನುಕೂಲವಾಗುವಂತೆ ಕಾರ್ಯ ಯೋಜನೆ ತಯಾರಿಸಿ, ಅನುಷ್ಠಾನಗೊಳಿಸಿ.

**ಹಣಕಾಸು ವಿವರ :** (03 ಮಕ್ಕಳನ್ನು ಒಂದು ತಂಡ ಎಂದು ಪರಿಗಣಿಸಿ)

| ವಿವರ | 06-07 | 08-09 | 09-10 (ಪ್ರತಿ ಮಗುವಿಗೆ) 3000-00 |
|---|---|---|---|
| ಸ್ವಯಂ ಸೇವಕರ ಗೌರವ ಧನ ತರಬೇತಿ + ಸಿ.ಜಿ. | 750 (ತಿಂಗಳಿಗೆ) ತರಬೇತಿ ಐಇಡಿ ಮಧ್ಯವರ್ತನೆಯಲ್ಲಿ | 3000-00 | ರೂ. 250 X 3 ಮಕ್ಕಳು (ಪ್ರತಿ ಮಗುವಿಗೆ) 750 |
| ಸಾರಿಗೆಗಾಗಿ | | 750-00 | 750-00 |
| ಟಿಎಲ್‌ಎಂ | | 200-00 | - |

**ಟಿಪ್ಪಣಿ** : 3 ಮಕ್ಕಳಿಗಿಂತ ಕಡಿಮೆ ಇದ್ದಲ್ಲಿ ಪ್ರತಿ ಮಗುವಿಗೆ ವರ್ಷಕ್ಕೆ 3,000/- ರೂಪಾಯಿಗಳ ಗೌರವ ಧನ ನೀಡುವುದು.

– ತರಬೇತಿಯನ್ನು ಐಇಡಿ ಮಧ್ಯವರ್ತನೆಯಲ್ಲಿ ಕೊಡಿಸುವುದು ಹಾಗೂ ಸ್ವಯಂ ಸೇವಕರಿಗೆ ಬೇಕಾದ ರಿಜಿಸ್ಟರ್‌ಗಳನ್ನು ಜಿಲ್ಲಾ ನಿರ್ವಹಣಾ ವೆಚ್ಚದಿಂದ ಖರೀದಿಸಿಕೊಡುವುದು.

**ಯಾರ ಮೂಲಕ ಬಿಡುಗಡೆ :**

- ಕಾರ್ಯತಂತ್ರವನ್ನು ಎನ್.ಜಿ.ಓ.ಗಳ ಮೂಲಕ ಮಾಡಿಸಿದರೆ ಅವರು ಮಗುವಿಗೆ ಶಿಕ್ಷಣ ನೀಡುತ್ತಿರುವುದನ್ನು ಖಾತರಿಪಡಿಸಿಕೊಂಡು ಘಟಕ ವೆಚ್ಚವನ್ನು 3 ಕಂತಿನಲ್ಲಿ, ಎನ್.ಜಿ.ಓ.ಗಳಿಗೆ ಸಂಸ್ಥೆ ಹೆಸರಿನಲ್ಲಿ ಕ್ರಾಸ್ಡ್ ಚೆಕ್ ರೂಪದಲ್ಲಿ ಹಣ ಬಿಡುಗಡೆ ಮಾಡಿ. ಅವರಿಂದ ಉಪಯೋಗ ಪ್ರಮಾಣ ಪತ್ರ ಹಾಗೂ ದೃಢೀಕರಣ ಪತ್ರ ಪಡೆಯಬೇಕು. ಇದಕ್ಕಾಗಿ MOU ಮಾಡಿಕೊಳ್ಳುವುದು ಕಡ್ಡಾಯ.

- ಮಗುವಿಗೆ ಯೋಜನೆಯಂತೆ ಶಿಕ್ಷಣ ನೀಡುತ್ತಿರುವುದನ್ನು ಸಂಬಂಧಿಸಿದ ಮುಖ್ಯ ಶಿಕ್ಷಕರು, ಮಗುವಿನ ಪೋಷಕರು ಮತ್ತು ಐ.ಇ.ಆರ್.ಟಿ. ಗಳಿಂದ ದೃಢೀಕರಿಸಿಕೊಳ್ಳಬೇಕು. ಈ ದೃಢೀಕರಣ ಆಧರಿಸಿ NGO ಗೆ ಅಥವಾ ಹೊರಗುತ್ತಿಗೆ ಪಡೆದ ಸಂಸ್ಥೆಗೆ ಸ್ವಯಂಸೇವಕರ ಗೌರವಧನವನ್ನು ಸಂದಾಯ ಮಾಡಬೇಕು.

- ತರಬೇತಿ ಹಣವನ್ನು ಎನ್.ಜಿ.ಓ.ಗಳಿಗೆ ನೀಡದೇ ಇಲಾಖೆಯೇ ತರಬೇತಿ ನೀಡಬೇಕು. ಆದರೆ ತರಬೇತಿ ನೀಡಲು ಎನ್.ಜಿ.ಓ.ಗಳ ಸಹಕಾರ ಪಡೆಯಬಹುದು.

- ಕಾರ್ಯತಂತ್ರವನ್ನು ನೇರವಾಗಿ ಇಲಾಖೆಯೇ ಅಂದರೆ ಬಿ.ಆರ್.ಸಿ. ಕೇಂದ್ರವೇ ನಡೆಸುವುದಾದರೆ ಘಟಕ ವೆಚ್ಚದಲ್ಲಿ ಸೂಚಿಸಿದಂತೆ ಹಣವನ್ನು ಸಂಬಂಧಿಸಿದ ಅಗತ್ಯಗಳಿಗೆ ವೆಚ್ಚ ಮಾಡಬೇಕು. ಹಾಗೂ ನಿಯಮಾನುಸಾರ ರಸೀದಿಗಳನ್ನು ಇಡಬೇಕು.

- ಗೌರವಧನವನ್ನು ಒಂದು ಮಗುವಿಗೆ ಒಂದು ತಿಂಗಳಿಗೆ 250/- ರಂತೆ 3 ಮಗುವಿಗೆ 750/- ರೂ.ಗಳನ್ನು ನೀಡಬೇಕು. ಒಬ್ಬ ಸ್ವಯಂ ಸೇವಕರಿಗೆ 3 ಮಕ್ಕಳಿಗಿಂತ ಹೆಚ್ಚು ಮಕ್ಕಳನ್ನು ನೀಡಬಾರದು.

- ಸ್ವಯಂ ಸೇವಕರಿಗೆ ಗೌರವಧನವನ್ನು ಸಂಬಂಧಿಸಿದ ಎನ್.ಜಿ.ಓ./ಏಜೆನ್ಸಿಗಳ ಮೂಲಕವೆ ವಿತರಿಸಬೇಕು.

### ಸ್ವಯಂ ಸೇವಕರ ನೇಮಕ/ತರಬೇತಿ :

- ಎಲ್ಲಾ ಕಾರ್ಯತಂತ್ರಗಳಲ್ಲಿ ಸ್ವಯಂ ಸೇವಕರನ್ನು ನೇಮಿಸಿದಂತೆ ಈ ಕಾರ್ಯತಂತ್ರಕ್ಕೂ ಸ್ವಯಂ ಸೇವಕರನ್ನು ಏಜೆನ್ಸಿ / ಎನ್.ಜಿ.ಓ.ಗಳ ಮೂಲಕವೇ ನೇಮಿಸಬೇಕೇ ವಿನಃ ನೇರವಾಗಿ ನೇಮಕ ಮಾಡುವಂತಿಲ್ಲ.
- ಸ್ವಯಂ ಸೇವಕರನ್ನು ನೇಮಿಸುವಾಗ ಐ.ಇ.ಡಿ.ಗೆ ಸಂಬಂಧಿಸಿದಂತೆ ವಿಶೇಷ ಪರಿಣಿತ ಹೊಂದಿರುವ ಸ್ವಯಂ ಸೇವಕರನ್ನು ನೇಮಿಸಿಕೊಳ್ಳುವುದು ಅಪೇಕ್ಷಣೀಯ.
- ವಿಶೇಷ ತರಬೇತಿ ಹೊಂದಿದವರು ದೊರೆಯದಿದ್ದಲ್ಲಿ ಆಸಕ್ತ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ವಿದ್ಯಾವಂತರನ್ನು ಆಯ್ಕೆ ಮಾಡಿ, ತರಬೇತಿ ನೀಡಿ, ಅವರನ್ನು ಗೃಹಾಧಾರಿತ ಶಿಕ್ಷಣ ನೀಡಲು ನಿಯೋಜಿಸಬಹುದು.
- ಆಯ್ಕೆ ಆದ ಎಲ್ಲಾ ಸ್ವಯಂ ಸೇವಕರಿಗೂ (ಎನ್.ಜಿ.ಓ.ಗಳ ಸ್ವಯಂ ಸೇವಕರು) ಹಾಗೂ ಇಲಾಖೆ ಏಜೆನ್ಸಿಗಳ ಮೂಲಕ ನೇಮಿಸಿಕೊಂಡ ಸ್ವಯಂ ಸೇವಕರಿಗೆ ತರಬೇತಿ ನೀಡಬೇಕು.
- ತರಬೇತಿಯನ್ನು ಡಯಟ್‌ಗಳವರು ಪಿ.ಜಿ.ಪಿ.ಡಿ. ತರಬೇತಿ ಹೊಂದಿದ ಉಪನ್ಯಾಸಕರ ಹಾಗೂ ಐಇಆರ್‌ಟಿ ಯವರ ನೆರವಿನಿಂದ ತರಬೇತಿ ಕೊಡಿಸಬೇಕು.
- ತರಬೇತಿ ವೇಳೆ ಸ್ವಯಂ ಸೇವಕರು ವಿಶೇಷ ಅಗತ್ಯತೆಯುಳ್ಳ ಮಕ್ಕಳ ಹಾಗೂ ಪೋಷಕರ ಜೊತೆ ಸಂಯಮದಿಂದ ವರ್ತಿಸುವ ಮನೋಭಾವವನ್ನು ಹಾಗೂ ಆಸಕ್ತಿಯಿಂದ ಕೆಲಸ ನಿರ್ವಹಿಸುವ ಪ್ರೇರಣೆಯನ್ನು ಸ್ವಯಂ ಸೇವಕರಿಗೆ ತುಂಬಬೇಕು.
- ಪ್ರತಿ ಸ್ವಯಂ ಸೇವಕರಿಗೆ ಯೋಜನೆಯಲ್ಲಿ ಜಾರಿಯಾದಂತೆ ಸನಿವಾಸ ತರಬೇತಿ ನೀಡಬೇಕು
- ಮಗುವಿನ ಪೋಷಕರಿಗೆ ಯೋಜನೆಯಲ್ಲಿ ಜಾರಿಯಾದಂತೆ ತರಬೇತಿಯನ್ನು ನೀಡಬೇಕು.
- ಇದಕ್ಕಾಗಿ ಐ.ಇ.ಡಿ. ಮಧ್ಯ ವರ್ತನೆಯಲ್ಲಿ ನೀಡಿರುವ ಹಣವನ್ನು ಬಳಸಬೇಕು.

### ಶಾಲೆ ನಿರ್ವಹಣೆ / ಜವಾಬ್ದಾರಿ :

- **ಶಾಲಾ ಹಂತದಲ್ಲಿ 6-14 ವಯೋಮಾನದ ತೀವ್ರತರದ ನ್ಯೂನತೆಯಿಂದ ಶಾಲೆಗೆ ದಾಖಲಾಗದ ಶಾಲೆಯನ್ನು ತೊರೆದ ಮಕ್ಕಳನ್ನು ಗುರ್ತಿಸಿ ಶಾಲೆಗಳಿಗೆ ದಾಖಲು ಮಾಡಿಕೊಳ್ಳುವುದು. ಹಾಜರಾತಿ ನಿರ್ವಹಿಸಿ ಎಲ್ಲಾ ಮಕ್ಕಳಂತೆ ಈ ಮಕ್ಕಳಿಗೂ ಸವಲತ್ತುಗಳು ಲಭ್ಯವಾಗುವಂತೆ ಮಾಡುವುದು.**
- ಸ್ವಯಂ ಸೇವಕರಿಂದ ಮಗುವಿಗೆ ಶಿಕ್ಷಣ ದೊರೆಯುವಂತೆ ಮಾಡುವುದು.
- ಮಗುವಿನ ದಾಖಲೆಗಳನ್ನು ಶಾಲೆಯಲ್ಲಿ ನಿರ್ವಹಿಸುವುದು.
- ಈ ಮಕ್ಕಳನ್ನು ಶಾಲೆಯ ಮಕ್ಕಳಂತೆ ಪರಿಗಣಿಸಬೇಕು. ವಿಶೇಷ ಸಂದರ್ಭಗಳಲ್ಲಿ ಈ ಮಕ್ಕಳನ್ನು ಶಾಲೆಗೆ ಕರೆಸಬೇಕು ಕ್ರಮೇಣ ಮಗು ಶಾಲೆಗೆ ಹಾಜರಾಗುವಂತೆ ಸಬಲೀಕರಣ ನೀಡಬೇಕು.

### ಐ.ಇ.ಆರ್.ಟಿ. (ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು) :

- ತಮ್ಮ ವ್ಯಾಪ್ತಿಯಲ್ಲಿನ ಮಕ್ಕಳನ್ನು ಗುರ್ತಿಸಿ ಶಾಲೆಗಳಿಗೆ ದಾಖಲು ಮಾಡಿಸುವುದು, ಲಭ್ಯ ಸೌಲಭ್ಯಗಳನ್ನು ಒದಗಿಸುವುದು.
- ಪೋಷಕರ ಜತೆ ಸಂಪರ್ಕಿಸಿ, ಸಮಾಲೋಚಿಸಿ ಮಗುವಿನ ವ್ಯಕ್ತಿ ಅಧ್ಯಯನ ಮಾಡಿ ವೈಯಕ್ತಿಕ ಶಿಕ್ಷಣ ಯೋಜನೆಯನ್ನು ಸಿದ್ಧಪಡಿಸಬೇಕು.
- ಗುರ್ತಿಸಿದ ಸ್ವಯಂ ಸೇವಕರಿಗೆ ತರಬೇತಿ ವ್ಯವಸ್ಥೆ ಮಾಡುವುದು ಹಾಗೂ ಅವರೊಂದಿಗೆ ಮಗುವಿನ ಶಿಕ್ಷಣ ಯೋಜನೆಯ ಬಗ್ಗೆ ಚರ್ಚಿಸಿ ಪಾಠ ಟಿಪ್ಪಣಿ, ಬೋಧನಾ ವಿಧಾನಗಳನ್ನು ನಿರ್ಧರಿಸುವುದು.
- ಮನೆಗಳಿಗೆ ಭೇಟಿ ನೀಡಿ ಶಿಕ್ಷಣ ನೀಡುವುದು ಹಾಗೂ ಸ್ವಯಂ ಸೇವಕರ ಕಾರ್ಯವನ್ನು ಪರಿಶೀಲಿಸಿ ದಾಖಲಿಸುವುದು ಮತ್ತು ದೃಢೀಕರಿಸುವುದು.

- ಮಕ್ಕಳ ವೈದ್ಯಕೀಯ ತಪಾಸಣೆ ಹಾಗೂ ಪುನಶ್ಚೇತನ ಕಾರ್ಯಗಳನ್ನು ನಿರ್ವಹಿಸುವುದು.
- ಶಾಲೆ, ಶಿಕ್ಷಕ, ಮಗು, ಕುಟುಂಬ, ಸಮುದಾಯ ಇಲಾಖೆಗಳ ಸಹಸಂಬಂಧ ಖಾತ್ರಿ ಪಡಿಸುವುದು.
- ಲಭ್ಯ ಅನುದಾನ ಬಳಸಿಕೊಂಡು ಪ್ರತಿ ಸಿ.ಆರ್.ಸಿ.ಯಲ್ಲಿ ಸಮನ್ವಯ ಶಿಕ್ಷಣ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸುವುದು.

**ಸ್ವಯಂ ಸೇವಕರು :**

- ತಮಗೆ ನಿರ್ದಿಷ್ಟಪಡಿಸಿದ ಮಕ್ಕಳ ವೈಯಕ್ತಿಕ ಶಿಕ್ಷಣ ಯೋಜನೆ ಸಿದ್ಧಪಡಿಸಿ ಅದರಂತೆ ಕಲಿಸುವುದು.
- ಮಕ್ಕಳ ಪೋಷಕರೊಡನೆ ಉತ್ತಮ ಸಂಪರ್ಕವಿರಿಸಿಕೊಂಡು ಮಗುವಿನ ಸಾಮರ್ಥ್ಯ ಹಾಗೂ ಕೊರತೆಗಳ ಬಗ್ಗೆ ಚರ್ಚಿಸಿ ಸಬಲೀಕರಣ ಚಟುವಟಿಕೆಗಳನ್ನು ಯೋಜಿಸುವುದು.
- ಮಗುವಿನೊಂದಿಗೆ ಮಗುವಿಗೆ ಇಷ್ಟವಾಗುವಂತೆ ನಡೆದುಕೊಳ್ಳುವುದು ಹಾಗೂ ಸೂಚಿತ ದಾಖಲೆಗಳನ್ನು ನಿರ್ವಹಿಸುವುದು.
- ವೈದ್ಯಕೀಯ ತಪಾಸಣೆ ಹಾಗೂ ಪುನಶ್ಚೇತನದ ಬಗ್ಗೆ ಜವಾಬ್ದಾರಿ ವಹಿಸುವುದು.
- ಮಗುವಿನ ಹಾಜರಾತಿಯನ್ನು ಸಂಬಂಧಿಸಿದ ಶಾಲೆಗೆ ನೀಡುವುದು.
- ಮಗುವಿಗೆ ಕಲಿಸಿರುವ ಅಂಶಗಳನ್ನು ಮಗುವಿಗೆ ನೀಡಬೇಕಾದ ಅಧ್ಯತೆಗಳನ್ನು ಪುನರ್ಬಲನ ಚಟುವಟಿಕೆಗಳನ್ನು ಆಯಾ ಶಿಕ್ಷಕರ / ಐಇಆರ್‌ಟಿ ಗಮನಕ್ಕೆ ತರಬೇಕು.

**ಸಿ.ಆರ್.ಪಿ. :**

- ತಮ್ಮ ವ್ಯಾಪ್ತಿಯ ಎಲ್ಲಾ ಮಕ್ಕಳ ಮಾಹಿತಿ ನಿರ್ವಹಣೆ ಮಾಡುವುದು.
- ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವುದು.
- ಐ.ಇ.ಆರ್.ಟಿ. ಹಾಗೂ ಸ್ವಯಂ ಸೇವಕರೊಂದಿಗೆ ಚರ್ಚಿಸಿ ಈ ಮಕ್ಕಳ ಶೈಕ್ಷಣಿಕ ಯೋಜನೆಯ ಮಾಹಿತಿ ಪಡೆದು ಅದರಂತೆ ಮನೆ ಮತ್ತು ಶಾಲೆಗಳಲ್ಲಿ ಮಾಹಿತಿ ನಿರ್ವಹಿಸುವುದು ಮತ್ತು ದೃಢೀಕರಿಸುವುದು.
- ಈ ಬಗ್ಗೆ ಶಿಕ್ಷಕರ ತರಬೇತಿಗಳನ್ನು ಆಯೋಜಿಸುವುದು ಹಾಗೂ ಮಾಸಿಕ ವಿನಿಮಯ ಸಭೆಗಳಲ್ಲಿ ಚರ್ಚಿಸುವುದು.
- ತಮ್ಮ ವ್ಯಾಪ್ತಿಯಲ್ಲಿ ಪೋಷಕರ ಆಪ್ತ ಸಮಾಲೋಚನೆ, ಸಮುದಾಯದಲ್ಲಿ ಜಾಗೃತಿ ಶಿಬಿರಗಳನ್ನು ನಡೆಸುವುದು.
- ಈ ಕಾರ್ಯಕ್ರಮದ ಪ್ರಗತಿ ಬಗ್ಗೆ ದಾಖಲೆಗಳನ್ನು ನಿರ್ವಹಿಸುವುದು ಹಾಗೂ ತಾಲ್ಲೂಕು ಹಂತಕ್ಕೆ ವರದಿ ಮಾಡುವುದು.

**ಬಿ.ಇ.ಓ./ಬಿ.ಆರ್.ಸಿ. :**

- ತಾಲ್ಲೂಕು ಹಂತದ ಮಾಹಿತಿ ನಿರ್ವಹಣೆ ಮಾಡುವುದು.
- ವಿಶೇಷ ಅಗತ್ಯತೆಗಳುಳ್ಳ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಿಕ್ಷಣ ಮುಖ್ಯವಾಹಿನಿಗೆ ತರುವ ಕ್ರಿಯಾ ಯೋಜನೆ ಮಾಡುವುದು.
- ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸ್ವಯಂ ಸೇವಕರ ಸೇವೆಯನ್ನು ಪಡೆಯಲು ಕ್ರಮಕೈಗೊಳ್ಳುವುದು.
- ಸ್ವಯಂ ಸೇವಕರು ಹಾಗೂ ಶಿಕ್ಷಕರಿಗೆ ತರಬೇತಿ ನೀಡುವುದು.
- ಪೋಷಕರಿಗೆ ಆಪ್ತ ಸಮಾಲೋಚನೆ, ಸಮುದಾಯಕ್ಕೆ ಜಾಗೃತಿ ಶಿಬಿರಗಳನ್ನು ಏರ್ಪಡಿಸುವುದು.
- ಮನೆ ಹಾಗೂ ಶಾಲೆಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲಿಸಿ ದೃಢೀಕರಿಸುವುದು ಮೇಲುಸ್ತುವಾರಿ ಮಾಡುವುದು.

**ಜಿಲ್ಲಾ ಕಛೇರಿ :**

- ಜಿಲ್ಲಾ ಹಂತದಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಆಯವ್ಯಯ ಒದಗಿಸಿಕೊಳ್ಳುವುದು.
- ಸ್ವಯಂ ಸೇವಾ ಸಂಸ್ಥೆಗಳಿಂದ ಸ್ವಯಂ ಸೇವಕರ ಸೌಲಭ್ಯ ಪಡೆಯಲು ಪ್ರಕಟಣೆ ನೀಡಿಕೆ ಪ್ರಸ್ತಾವನೆ ಪಡೆದು ಜಿಲ್ಲಾ ಪರಿಷ್ಕರಣೆ ಸಮಿತಿಯಲ್ಲಿ ಒಪ್ಪಿಗೆ ಪಡೆದು ರಾಜ್ಯ ಕಛೇರಿಗೆ ಸಲ್ಲಿಸುವುದು.
- ಸಕಾಲದಲ್ಲಿ ಹಣ ಬಿಡುಗಡೆ ಮಾಡುವುದು ಹಾಗೂ ಫಲಾನುಭವಿಗಳಿಗೆ ತಲುಪಿದ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ತರಬೇತಿಗಳನ್ನು ಆಯೋಜಿಸಿ ಸಂಪನ್ಮೂಲಗಳನ್ನು ಒದಗಿಸುವುದು.
- ಜಿಲ್ಲಾ ಮಟ್ಟದಲ್ಲಿ ಪ್ರಗತಿಪರಿಶೀಲನೆ ಮಾಡಿ ಮಾರ್ಗದರ್ಶನ ನೀಡುವುದು.

**ನಿರ್ವಹಣೆ ಮಾಡಬೇಕಾದ ದಾಖಲೆಗಳು :**

- ಶಾಲಾ ಹಂತದಲ್ಲಿ ದಾಖಲಾತಿ, ಹಾಜರಾತಿ, ಸೌಲಭ್ಯಗಳ ವಿತರಣೆ ವಹಿ.
- ವ್ಯಕ್ತಿ ಅಧ್ಯಯನ, ವೈಯಕ್ತಿಕ ಶಿಕ್ಷಣ ಯೋಜನೆ, ಪ್ರಗತಿ ಮಾಹಿತಿ.
- ಐ.ಇ.ಆರ್.ಟಿ. ಸ್ವಯಂ ಸೇವಕರ, ಕಾರ್ಯನಿರ್ವಹಣೆಗೆ, ನೀಡಿದ ಸೂಚನೆಗಳ ವಹಿ.
- ಮೇಲುಸ್ತುವಾರಿ ಅಧಿಕಾರಿಗಳು ಭೇಟಿ ಸಂದರ್ಭದಲ್ಲಿ ನೀಡಿರುವ ಸೂಚನೆಗಳ ದಾಖಲೆ ವಹಿ.
- ಮಕ್ಕಳ ವೈದ್ಯಕೀಯ ತಪಾಸಣೆ – ಪುನಶ್ಚೇತನದ ದಾಖಲೆಗಳು.

**ಪಠ್ಯವಸ್ತು :**

ಮಗುವಿನ ಅವಶ್ಯಕತೆಗಳಿಗನುಗುಣವಾಗಿ ಸಾಮಾಜಿಕ ಕೌಶಲ್ಯಗಳು, ಜೀವನ ಕೌಶಲ್ಯಗಳು, ಔದ್ಯೋಗಿಕ ಕೌಶಲ್ಯಗಳು ಹಾಗೂ ನಿರ್ದಿಷ್ಠ ನ್ಯೂನ್ಯತೆಗೆ ತಕ್ಕ ಪಠ್ಯವಸ್ತುವಿನ ಅವಶ್ಯಕತೆಯಿದ್ದು ಸರ್ವ ಶಿಕ್ಷಣ ಅಭಿಯಾನದಿಂದ ಸಿದ್ಧಪಡಿಸಿದ ಸಮನ್ವಯ ಶಿಕ್ಷಣ ಕೈಪಿಡಿಯಲ್ಲಿನ ಮಾಹಿತಿ ಹಾಗೂ ಸ್ಪರ್ಶ ಹೊತ್ತಿಗೆಯ ಮಾಹಿತಿಯನ್ನು ಬಳಸಬಹುದಾಗಿರುತ್ತದೆ.

**ಬೋಧನ ಕಲಿಕಾ ಸಾಮಗ್ರಿ :**

ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ಕೇಂದ್ರಗಳಲ್ಲಿ ಲಭ್ಯವಿರುವ ಕಲಿಕಾ ಸಾಮಗ್ರಿಗಳನ್ನು ಶಾಲೆಗಳಲ್ಲಿರುವ ಕಲಿಕಾ ಸಾಮಾಗ್ರಿಗಳನ್ನು ಮಗುವಿನ ಶೈಕ್ಷಣಿಕ ಯೋಜನೆಗೆ ಸಂಬಂಧಿಸಿದಂತೆ ಬಳಸಿಕೊಳ್ಳುವುದು.

**ಮೇಲುಸ್ತುವಾರಿ ವರದಿ ಸಲ್ಲಿಕೆ :**

- ಈ ಮಕ್ಕಳ ಶಿಕ್ಷಣದ ಬಗ್ಗೆ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, IERT, CRP ಯವರು ಕಡ್ಡಾಯವಾಗಿ ಭೇಟಿ ನೀಡಿ ಮಗುವಿನ ವೈಯಕ್ತಿಕ ಶಿಕ್ಷಣ ಯೋಜನೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಚಟುವಟಿಕೆಗಳು, ಆಗಿರುವ ಪ್ರಗತಿ ಬಗ್ಗೆ ವರದಿ ಮಾಡುವುದು.
- ಐ.ಇ.ಆರ್.ಟಿ/ಸಿಆರ್‌ಪಿ/ಇಸಿಓ ಗಳು ತಿಂಗಳಿಗೊಮ್ಮೆ ಪ್ರತಿ ಮಗುವಿನ ಮನೆಗೆ ಭೇಟಿ ನೀಡಬೇಕು.
- ಸಮುದಾಯಕ್ಕೆ ದೊರಕಿರುವ ತರಬೇತಿ, ಶಿಕ್ಷಕರ ಭಾಗವಹಿಸುವಿಕೆ ಬಗ್ಗೆ ವರದಿ ಮಾಡುವುದು.
- ಐ.ಇ.ಆರ್.ಟಿ//ಸಿಆರ್‌ಪಿ/ಇಸಿಓ ರವರು ಭೇಟಿ ಮಾಡಿದಾಗ ಮಕ್ಕಳ ಪ್ರಗತಿ, ಹಣಕಾಸು ನಿರ್ವಹಣೆ ಬಗ್ಗೆ, ಸ್ವಯಂ ಸೇವಾ ಸಂಸ್ಥೆಗಳ ಭಾಗವಹಿಸುವಿಕೆ ಬಗ್ಗೆ ಪರಿಶೀಲಿಸಿ ವರದಿ ಮಾಡುವುದು.

* * * * *